# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1349 (1552) |
| ಸದಸ್ಯರ ಹೆಸರು | : | ಶ್ರೀ ಪ್ರತಾಪ್ ಸಿಂಹನಾಯಕ್ ಕೆ.<br>(ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ: | : | 17.03.2026 |
| ಉತ್ತರಿಸುವ ಸಚಿವರು | : | ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು . |

| ಕ್ರಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | ರಾಜ್ಯದಲ್ಲಿ ರೈಲ್ವೆ ಮೂಲಸೌಕರ್ಯ ವಿಸ್ತರಣೆಯ ಕನಸಿಗೆ ಭೂಸ್ವಾಧೀನ ಪ್ರಕ್ರಿಯೆ ವಿಳಂಬದ ಕಾರಣದಿಂದಾಗಿ ಸಕಾಲದಲ್ಲಿ ಜಮೀನು ಹಸ್ತಾಂತರವಾಗದೆ ಹಲವು ಪ್ರಮುಖ ಯೋಜನೆಗಳು ಧೀರ್ಘಕಾಲದಿಂದ ಕುಂಠಿತಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | 9 ನೂತನ ರೈಲು ಮಾರ್ಗ ಯೋಜನೆಗಳಿಗೆ ರಾಜ್ಯ ಸರ್ಕಾರದಿಂದ ಆಡಳಿತಾತ್ಮಕ ಅನುಮೋದನೆ ನೀಡಿ, ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಯೋಜನೆಗಳ ವಿವರ ಈ ಕೆಳಕಂಡಂತಿದೆ:<br><br>1. ತುಮಕೂರು- ರಾಯದುರ್ಗ ನೂತನ ರೈಲು ಮಾರ್ಗ ಯೋಜನೆ<br>2. ಗಿಣಿಗೇರಾ – ರಾಯಚೂರು ನೂತನ ರೈಲು ಮಾರ್ಗ ಯೋಜನೆ<br>3. ಬಾಗಲಕೊಟೆ –ಕುಡಚಿ ನೂತನ ರೈಲು ಮಾರ್ಗ ಯೋಜನೆ<br>4. ಗದಗ-ವಾಡಿ ನೂತನ ರೈಲು ಮಾರ್ಗ ಯೋಜನೆ<br>5. ತುಮಕೂರು- ಚಿತ್ರದುರ್ಗ-ದಾವಣಗೆರೆ ನೂತನ ರೈಲು ಮಾರ್ಗ ಯೋಜನೆ<br>6. ಚಿಕ್ಕಮಗಳೂರು- ಬೇಲೂರು ನೂತನ ರೈಲು ಮಾರ್ಗ ಯೋಜನೆ<br>7. ಶಿವಮೊಗ್ಗ- ಶಿಕಾರಿಪುರ- ರಾಣೆಬೆನ್ನೂರು ನೂತನ ರೈಲು ಮಾರ್ಗ ಯೋಜನೆ<br>8. ಧಾರವಾಡ-ಬೆಳಗಾವಿ ನೂತನ ರೈಲು ಮಾರ್ಗ ಯೋಜನೆ<br>9. ಬೇಲೂರು –ಹಾಸನ ನೂತನ ರೈಲು ಮಾರ್ಗ ಯೋಜನೆ. |
| (ಆ) | ಬಂದಿದ್ದಲ್ಲಿ. ಈಗಾಗಲೇ ಆಡಳಿತಾತ್ಮಕ ಅನುಮೋದನೆಗೊಂಡು ರಾಜ್ಯದಲ್ಲಿ ಅನುಷ್ಠಾನಗೊಳ್ಳಲು ಸಿದ್ಧವಾಗಿರುವ ರೈಲ್ವೆ ಯೋಜನೆಗಳು ಎಷ್ಟು; ಮತ್ತು ಯಾವುವು; (ಸಂಪೂರ್ಣ ವಿವರ ನೀಡುವುದು) | |

<table>
<tr>
<td>(ಇ)</td>
<td>ಆಡಳಿತಾತ್ಮಕ ಅನುಮೋದನೆಗೊಂಡಿರುವ ರೈಲ್ವೆ ಯೋಜನೆಗಳ ಪ್ರಗತಿ ಪ್ರಸ್ತುತ ಯಾವ ಹಂತದಲ್ಲಿದೆ: (ಸಂಪೂರ್ಣ ವಿವರ ನೀಡುವುದು)</td>
<td>ಭೂಸ್ವಾಧೀನ ವಿವರವೂ ಸೇರಿದಂತೆ 9 ರೈಲ್ವೆ ಯೋಜನೆಗಳ ಪ್ರಸ್ತುತ ಪ್ರಗತಿ ಹಂತ ಈ ಕೆಳಕಂಡಂತಿದೆ:
<table>
<tr><th>ಕ್ರ. ಸಂ</th><th>ಯೋಜನೆ</th><th>ಅವಶ್ಯವಿರುವ ಜಮೀನು</th><th>ಸ್ವಾಧೀನಪಡಿಸಿಕೊಂಡಿರುವ ಜಮೀನು</th><th>ಶೇ. ವಾರು ಸ್ವಾಧೀನಪಡಿಸಿಕೊಂಡಿರುವ ಜಮೀನು</th><th>ಬಾಕಿ ಇರುವ ಜಮೀನು</th><th>ಕಾಮಗಾರಿಯ ಭೌತಿಕ ಪ್ರಗತಿ (%)</th></tr>
<tr><td>1</td><td>ಗಿಣಿಗೇರಾ - ರಾಯಚೂರು</td><td>2425</td><td>2425</td><td>100%</td><td>0</td><td>66%</td></tr>
<tr><td>2</td><td>ತುಮಕೂರು-ರಾಯದುರ್ಗ</td><td>1395.34</td><td>1395.34</td><td>100%</td><td>0</td><td>70%</td></tr>
<tr><td>3</td><td>ಚಿಕ್ಕಮಗಳೂರು-ಬೇಲೂರು</td><td>323.12</td><td>323.12</td><td>100%</td><td>0</td><td>85%</td></tr>
<tr><td>4</td><td>ಬಾಗಲಕೋಟೆ-ಕುಡಚಿ</td><td>2548.22</td><td>2,436.16</td><td>95.61%</td><td>112.06</td><td>38%</td></tr>
<tr><td>5</td><td>ಗದಗ-ವಾಡಿ</td><td>4335.21</td><td>4,079.03</td><td>94.09%</td><td>256.18</td><td>29%</td></tr>
<tr><td>6</td><td>ತುಮಕೂರು-ದಾವಣಗೆರೆ</td><td>2470.35</td><td>2,330</td><td>94.29%</td><td>140.35</td><td>18%</td></tr>
<tr><td>7</td><td>ಬೇಲೂರು-ಹಾಸನ</td><td>546.15</td><td>4.11</td><td>1%</td><td>542.04</td><td>-</td></tr>
<tr><td>8</td><td>ಶಿವಮೊಗ್ಗ-ಶಿಕಾರಿಪುರ-ರಾಣೆಬೆನ್ನೂರು</td><td>1346.20</td><td>1,127.01</td><td>70%</td><td>219.19</td><td>11.5%</td></tr>
<tr><td>9</td><td>ಧಾರವಾಡ-ಬೆಳಗಾವಿ</td><td>1523.21</td><td>1523.21</td><td>0</td><td>1523.21</td><td>-</td></tr>
<tr><td colspan="2">ಒಟ್ಟು</td><td>16914.00</td><td>15642.18</td><td>83.48%</td><td>2793.03</td><td></td></tr>
</table>
</td>
</tr>
<tr>
<td>(ಈ)</td>
<td>ಸುಬ್ರಹ್ಮಣ್ಯ-ಧರ್ಮಸ್ಥಳ ರೈಲು ಮಾರ್ಗದ ಸರ್ವೇ ಈಗಾಗಲೇ ಪೂರ್ಣಗೊಂಡಿದೆಯೇ; ಹಾಗೂ ಆರಂಭಿಕ ಕಾಮಗಾರಿಗಳಿಗೆ ಬೇಕಾಗಿರುವ ಅನುದಾನವನ್ನು ಕಾಮಗಾರಿಗಳಿಗೆ ಒದಗಿಸಲಾಗಿದೆಯೇ; ಈ ಯೋಜನೆಯ ಪ್ರಗತಿ ಪ್ರಸ್ತುತ ಯಾವ ಹಂತದಲ್ಲಿದೆ;</td>
<td>ರಾಜ್ಯ ಸರ್ಕಾರಕ್ಕೆ ರೈಲ್ವೆ ಇಲಾಖೆಯಿಂದ ಯಾವುದೇ ಪ್ರಸ್ತಾವನೆಯು ಸ್ವೀಕೃತವಾಗಿರುವುದಿಲ್ಲ.</td>
</tr>
<tr>
<td>(ಉ)</td>
<td>ದೀರ್ಘ ಕಾಲದಿಂದ ನೆನೆಗುದಿಗೆ ಬಿದ್ದಿರುವ ರಾಜ್ಯಕ್ಕೆ ಸಂಬಂಧಿಸಿದ ಎಲ್ಲಾ ರೈಲ್ವೆ ಯೋಜನೆಗಳನ್ನು ತ್ವರಿತವಾಗಿ ಪೂರ್ಣಗೊಳಿಸಲು ಸರ್ಕಾರ ಈ ಕೂಡಲೇ ಅಗತ್ಯ ಕ್ರಮವಹಿಸುವುದೇ?</td>
<td>ರಾಜ್ಯ ಸರ್ಕಾರ ಮತ್ತು ರೈಲ್ವೆ ಮಂತ್ರಾಲಯದಿಂದ 50:50 ಆಧಾರದ ಮೇಲೆ ವೆಚ್ಚ ಹಂಚಿಕೆ ಮಾಡಿಕೊಂಡು ರಾಜ್ಯದಲ್ಲಿ 9 ನೂತನ ರೈಲು ಮಾರ್ಗ ಯೋಜನೆಯನ್ನು ಕೈಗೆತ್ತಿಕೊಳ್ಳಲಾಗಿದೆ. ಪ್ರಸ್ತುತ ಪ್ರಗತಿಯಲ್ಲಿರುವ 9 ನೂತನ ರೈಲು ಮಾರ್ಗ ಯೋಜನೆಗಳ ಪ್ರಗತಿ ಕಾರ್ಯ ತ್ವರಿತವಾಗಿ ನಡೆಯುತ್ತಿದೆ.</td>
</tr>
</table>

ಮೂಲಇ 69 ರಾರಾಹೆ 2026/ಇ

**(ಎಂ.ಬಿ. ಪಾಟೀಲ)**

ಬೃಹತ್ ಮತ್ತು ಮಧ್ಯಮ ಕೈಗಾರಿಕೆ

ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು